19. ಹಾಲೀ ಶಿವಮೊಗ್ಗಾ ಜೈಲ್‌ನಲ್ಲಿ 225 ಮಂದಿ ಖೈದೀದ್ದಾರೆ, ಈ ಸಾಲ್‌ನಲ್ಲಿ ಷುಮಾರ್ 250 ವರಿಗೆ ಜಾಸ್ತಿಯಾಗಬಹುದಾಗಿ ಅಂದಾಜು ಯಿರುತ್ತೆ.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುಕ್ತಮಿನ ಮೈಸೂರು ಗೆಜಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರಿಂಟೆಂಡೆಂಟರವರನ್ನ ಕೇಳಿ ಆಗಲಿ ತಿಳುಕೊಳ್ಳಬಹುದು.

ಪಿ. ಪಂಚನಾಥರಾವ್,
ಜೈಲ್ ಸೂಪರಿಂಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಜನವರೀ 1885.

ಇದರಿಂ' ಸರ್ವರಿಗಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ತೀರ್ಕೆರೆ ತಾಲ್ಲೂಕು ಕಾರ್ಮಾದುರ್ಗಕ್ಕೆ ಕೇರಿದ 180 ಯಕರ ವಿಸ್ತೀರ್ಣವುಳ್ಳ ಪುರಾ 6ನೇ ಸರ್ವೇ ನಂಬರ್ ಬೀಳು ಜಮೀನಿಗೆ ಕಾಫಿ ಸಾಗುವಳೀ ಬಗ್ಗೆ ದರಖಾಸ್ತು ಬಂದಿರುವದರಿಂದ ಸದರೀ ಜಮೀನು 1885ನೇ ಇಸವಿ ಫಿಬ್ರವರೀ 20ನೇ ಮುಕ್ತಮಿನಲ್ಲಿ ತೀರ್ಕೆರೆ ತಾಲ್ಲೂಕು ಅಮಲ್ದಾರ್ರ ರೂಬರೂ ತೀರ್ಕೆರೆ ಮೊಕ್ತಾಮಿನಲ್ಲಿ ಐಯಿಂದ ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯ ತೆರುವದಕ್ಕೂ, ಯಾವದಾದರೂ ನೀರು ಪುಳಸಿಕೊಳ್ಳುವದರ ಮತ್ತು ಆವಶ್ಯಕವಾದ ಯಾವದಾದರೂ ಮಾರ್ಗದ ಹಕ್ಕುದಾರಿಗೂ ತಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಕ್ರಯದಾರನು ಹರಾಜು ಖೈದಾದ ಕೂಡ್ಲೇ ಕ್ರಯದ ಮೊಬಲಗ ಪೈಕೀ ಕೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು. ಬಾಕಿ ಕ್ರಯದ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸಗಳ ಪಳಗಾಗಿ ಪಾವತೀ ಮಾಡದೆ ಯಿದ್ದಲ್ಲಿ ಮೊದಲು ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

3. ಹಾಗೆ ಡಿಪಾಜಿಟ್ ಯಿಡಲ್ಪಡದೆ ಹೋದರು ಯಾ ಕ್ರಯದ ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಯಿದ್ದರೆ, ಜಮೀನು ಅವ್ವಲ್ ಕ್ರಯದಾರನ ಖರ್ಚಿಗೂ ಲುಕ್ಸಾನಿಗೂ ಪಳಪಟ್ಟು ಪುನಹಾ ಹರಾಜ್ ಹಾಕಲ್ಪಡುವದು.

4. ಜಮೀನಿನ ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ಪರಿಯಂತ ಆಖೈರಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚಕ್ಕುಬಂದಿಯು ಇವರ ಕೆಳಗೆ ಕಾಣಿಸಿರುತ್ತೆ; ಇನ್ನೂ ಜಾಸ್ತಿ ತಪಸೀಲ್‌ಗಳು ಹರಾಜ್ ಕಾಲವಲ್ಲಿ ಕೇಳಿ ತಿಳಿದುಕೊಳ್ಳಬಹುದು. ತಪಸೀಲ್‌ಸಲ್ಲಾಗಲಿ ಅಂದಾಜಾ ಬೀಜವರಿ ವಿಷಯವಲ್ಲಾಗಲಿ ಯಿರುವ ಗಲ್ಲತಿಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಸರ್ವೇ ನಂಬರ್ 21
ದಕ್ಷಿಣಕ್ಕೆ—ಲತ್ತಿಗರೆ ಗ್ರಾಮದ ಜಮೀನು
ಪೂರ್ವಕ್ಕೆ—ಸಂತವೇರಿಯಿಂದಚಿಕ್ಕಮಗಳೂರಿಗೆ ಹೋಗುವ ರಸ್ತೆ
ಪಶ್ಚಿಮಕ್ಕೆ—ಸರ್ವೇ ನಂಬರ್ 5

ಮಹಮ್ಮದ್ ಅಲ್ಲಿ, ಕೆ. ಬಿ.,
ಆಫೀಸಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಸ್ಯ 1884ನೇ ಇಸವಿ ನವೆಂಬರ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಚಿಂಗಳೂರು ಡಿಸ್ಟ್ರಿಕ್ಟ್.

ಮಳೆ—ಹೆಡ್ ಕ್ವಾರ್ಟರ್‌ನಲ್ಲಿ 3 ಅಂಗುಲ 47 ಸೆಂಟಸ್ ಮಳೆ ಆಳಂಎಲ್ಪಟ್ಟಿತು. ಡಿಸ್ಟ್ರಿಕ್ಟ್ ಮುಳೆ ಸಾಧಾರಣವಾಗಿ ಅದ ಮಳೆಯಿಂದ ಪಳಿಯಲ್ಲಿಯುವ ಫಸಲಿಗೆ ವಿಶೇಷ ಮೇಲು ಉಂಟಾಯಿತು.

ಪಳಿಯ ಸ್ಥಿತಿ—ಕಬ್ಬು ಮುಸ್ಸಿ ಫಸಲುಗಳು ಛಂದಾಗಿವೆ, ರಾಗಿ ರೇಚಿ ಕೆಲಸವು ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲ್ಪಟ್ಟಿತು.

ಜನಾರೋಗ್ಯ—ಛಂದಾಗಿದೆ; ಆಕ್ಟೋಬರ್ ತಿಂಗಳಲ್ಲಿ 596 ಮಂದಿಯೂ ಅದರ ಹಿಂದಿನತಿಂಗಳಲ್ಲಿ 644 ಮಂದಿಯೂ ಹೋಗಿರುತ್ತಾರೆ; ಮೊಕಾಬಿಲಾ 48 ಕಮ್ಮಿ. ಮುಖ್ಯವಾಗಿ ಜ್ವರದಿಂದಲೆ ಜನಗಳು ಸತ್ತಿರುತ್ತಾರೆ.

ಕಾಲ್ನಡೆ—ಆರೋಗ್ಯವಾಗಿವೆ, ಸದರೀ ಮಾಹೆಯಲ್ಲಿ 1795 ಕಾಲ್ನಡೆಗಳೂ ಅದರ ಹಿಂದಿನ ತಿಂಗಳಲ್ಲಿ 2465 ಕಾಲ್ನಡೆಗಳೂ ಹೋಗಿರುತ್ತವೆ; ಈ ಪೈಕೀ ದುಷ್ಟಮೃಗಗಳಿಂದ ಕೊಲ್ಲಲ್ಪಟ್ಟವು 225.

ಜಮಿನು—ನಾಗುವಳೀ ಬಗ್ಗೆ 1367—0—8 ರೂ. ಕಂದಾಯ ಬಾಳುವ ಜಮಿನು ತೆಗದುಕೊಳ್ಳಲ್ಪಟ್ಟಿತು.

ಎ. ಡೆಪ್. ಮೆಕ್ಕಿಟ್ಯೈರ್,
ಡೆಪ್ಯೂಟಿ ಕಮ್ಮಿಷನರ್.

ಕೊಡಗು.

ನೋಟೀಸ್‌ಗಳು.

ತಾರೀಖು 4ನೇ ಡಿಸಂಬರ್ ಸ್ಯ 1884.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಜನವರೀ ತಾರೀಖು 1ರಿಂದ ಕೊಡಗು ಫಾರೆಸ್ಟುಗಳಲ್ಲಿ ಬಿದರುಗಳನ್ನು ವಂದುಸಾವಿರಕ್ಕೆ 7—8—0 ಮೇರೆ ಮಾರುತ್ತೇವೆ.

ಕೊಂಡುಕೊಳ್ಳುವವರು ಬಿದರುಗಳನ್ನು ತಾವೇ ಕಡಿದುಕೊಳ್ಳಬೇಕು.

ಬಿದರುಗಳು ಬೇಕಾದವರು ಫೈಜರ್‌ಪೇಟೆ, ಮಾಲ್ದಾರೆ, ಮತ್ತು ತಿತಿಮತಿಯಲ್ಲಿ ಇರುವ ಫಾರೆಸ್ಟರವರಿಗೆ ದರಖಾಸ್ತು ಮಾಡಿಕೊಳ್ಳ ತಕ್ಕದ್ದಿದೆ.

ತಾರೀಖು 14ನೇ ಜನವರೀ ಸ್ಯ 1885.

ಕೊಡಗು ಫಾರೆಸ್ಟ್ ಇಲಾಖೆಯ ಬಾಬತು ಹುಣಸೂರು ಡಿಪೋದಲ್ಲಿರುವ ಈ ಕೆಳಗೆ ನಮೂದ ಮಾಡಿದ ನಾಟಾಗಳನ್ನು ಇದೇ ಇಸವಿ ಫಿಬ್ರವರೀ ತಾರೀಖು 10ನೇ ದಿನ ಹುಣಸೂರಲ್ಲಿ ಬಹಿರಂಗವಾದ ಹರಾಜು ಮಾಡುತ್ತೇವೆ.

ತ್ಯಾಗ .. .. 400 ನಾಟಾಗಳು. | ಹೊನ್ನೆ .. .. 200 ನಾಟಾಗಳು

ನಿಬಂಧನೆ—ಸ್ಯ 1873ನೇ ಇಸವಿ ಮೈಸೂರು ಗೆಜಿಟ್ಟಿನಲ್ಲಿ ಪಾಯಿಷ್ ಮಾಡೋಣಾದ ಜೂ ತಾರೀಖು 12ನೇ ನಂಬರು 20ನೇ ನೋಟಿಫಿಕೇಷ್ ವೇರೆ.

ಎಫ್. ಬಿ. ಡಿಕೆಸ್ಸ್,
ಡೆಪ್ಯೂಟಿ ಕನಸರವೇಟರ್ ಆಫ್ ಫಾರೆಸ್ಟ್ಸ್.

ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಇಸವಿ ಫೆಬ್ರವರಿ ಗುಯೇ ತಾರೀಖು ಲಾಗಾಯಿತು ಜೂ 30ನೇ ತಾರೀಖಿವರಿಗೆ ಇದರಡಿ ಕಂಡ ಪ್ಲಾಂಟೇಷ್‌ಗಳು ಬೇರೆ ಕಾಲಕ್ಕೊಸ್ಕರ ಮುಚ್ಚಲ್ಪಡುವ ಬೇಟಗಾರರು ಪ್ಲಾಂಟೇಷ್‌ಗಳ ಚಾರ್ಜ್‌ನಲ್ಲಿರುವ ಫಾರೆಸ್ಟ್ಆಫೀಸ್ಸರುವರ ವಿಶೇಷ ಅಪ್ಪಣೆಯಿಲ್ಲದೆ ಸದರೀ ಪ್ಲಾಂಟೇಷ್‌ಗಳನ್ನು ಪ್ರವೇಶಮಾಡಲು ಅವಕಾಶ ಕೊಡಲ್ಪಡುವದಿಲ್ಲ.

ಪ್ಲಾಂಟೇಷ್‌ಗಳು.		ತಾಲ್ಲೂಕು.
ಕಾಪಗೋಡಿ		ಹೊನಕೋಟೆ
ಜಡಿಗೇನಹಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ್	(A. B. ಮ C.)	ಡಿಟೋ
ತಟ್ಟೂರು		ಡಿಟೋ
ತಿಂಡಲ್		ಹೊನಕೋಟೆ ಮತ್ತು ಮಾಲೂರು